ಬ್ಯಾಂಕ್ ಖಾತೆ ವಿವರ ತಿಳಿಸಿದ್ರು. ಅದು ಸುಬ್ಬಯ್ಯನ ಹೆಸರಿನಲ್ಲಿರೋ ಖಾತೆ. ಬ್ಯಾಂಕಿನಲ್ಲಿ ವಿಚಾರಿಸಿದಾಗ ಅಲ್ಲಿಗೆ ಇಂಗ್ಲಂಡಿನಿಂದ ಪ್ರತಿ ತಿಂಗಳೂ ಹಣ ಬರುವ ವಿಚಾರ ತಿಳಿತು. ಆ ಖಾತೆಯನ್ನು ಸುಬ್ಬಯ್ಯನ ವಿವರಗಳನ್ನು ನೀಡಿ, ತೆರೆದಿದ್ದ. ಬಹುಶಃ ಅದಕ್ಕೆ ಸುಬ್ಬಯ್ಯನ ಹೆಸರಲ್ಲಿ ಸಹಿ ಹಾಕ್ತಿದ್ದಿದ್ದು ಪರೇಶ್. ಬ್ಯಾಂಕಿನವರು ಸುಬ್ಬಯ್ಯ ಬ್ಯಾಂಕಿಗೆ ಬಂದೇ ಇಲ್ಲ, ಪರೇಶ್‌ನೇ ಸಹಿ ಹಾಕಿಸಿಕೊಂಡು ಬಂದಿದ್ದ ಅಂತ ತಿಳಿಸಿದ್ರು. ಎಲ್ಲಿಯಾದ್ರೂ ಮೊಮ್ಮಗ ಅಜ್ಜನ ಬಳಿ ಹಣ ಸಿಕ್ಕುತ್ತಿದೆಯಾ ಅಂತ ಕೇಳಿದ್ರೆ ತೊಂದರೆ ಆಗುತ್ತೆ ಅಂತ ರಚನ್‌ನ್ನನ್ನು ನಕಲಿಯಾಗಿ ಉಪಯೋಗಿಸಿದ. ಅಜ್ಜನನ್ನು ನೋಡದ್ದರಿಂದ ಮೊಮ್ಮಗನಿಗೆ ನಕಲಿ ಅಜ್ಜನ ಗುರುತಾಗಲಿಲ್ಲ..."

"ಆದ್ರೆ ರಚನ್ ಯಾಕೆ ಇದ್ಕೆ ಒಪ್ಕೊಂಡರು? ಪರೇಶನ ಮೋಸದಾಟದಲ್ಲಿ ಭಾಗಿಯಾಗೋಕೆ?" ಸುಭಾಷಿಣಿಗೆ ನಂಬಿಕೆ ಬಂದಿರಲಿಲ್ಲ.

"ನೀವು ನಂಬೋದಿಲ್ಲ. ರಚನ್‌ಗೆ ಹುಡುಗಿಯರ ಹುಚ್ಚು! ಆ ದೌರ್ಬಲ್ಯವನ್ನು ಬಳಸಿ, ರಚನ್‌ನನ್ನು ಒಪ್ಪಿಸಿರಬೇಕು. ಒಂದೋ ಹನಿಟ್ರಾಪ್ ಅಥವಾ ಆ ಪಾಳು ಕಟ್ಟಡದ ನೆಲಮಾಳಿಗೆಯಲ್ಲಿ ಹುಡುಗಿಯರ ವ್ಯವಸ್ಥೆ... ರಚನ್ ನಕಲಿ ಸುಬ್ಬಯ್ಯನಾಗಲು ಸಮ್ಮತಿಸಲು ಇರುವ ಕಾರಣಗಳು!..."

"ಈಗ ಸುಬ್ಬಯ್ಯನನ್ನು ಬಂಧಿಸಿಡಲು ಕಾರಣ?" ನಾನು ಕೇಳಿದೆ.

"ಹೈದರಾಬಾದಿನಲ್ಲಿ ಎಡವಟ್ಟಾಗಿದೆ. ಅಜ್ಜನ ಜೊತೆ ವಾರ ಕಳೆದ ಮೇಲೆ ಹಠಾತ್ತಾಗಿ ಮಾರ್ಕ್ ಮನೆ ನೋಡಬೇಕು ಎಂದು ಅನಿಸಿರಬೇಕು. ಆಗ ಸುಬ್ಬಯ್ಯನನ್ನು ಬಚ್ಚಿಡಲೇಬೇಕಾದ ಅನಿವಾರ್ಯತೆ ಬಂತು! ಹೈದರಾಬಾದಿನ ಹೋಟೇಲಿಂದ ವಿರಾಜಪೇಟೆಗೆ ಮಾರ್ಕ್ ಟ್ಯಾಕ್ಸಿ ಬುಕ್ ಮಾಡಿದ್ದನ್ನು ನನ್ನ ಸ್ನೇಹಿತ ತಿಳಿಸಿದ. ಪರೇಶ್ ತನ್ನ ಜನರ ಮೂಲಕ ತಕ್ಷಣ ಸುಬ್ಬಯ್ಯನನ್ನು ನಿನ್ನೆ ರಾತ್ರಿ ಇಲ್ಲಿಗೆ ತಂದಿರಿಸಿದ. ಈಗ ಖಂಡಿತಾ ರಚನ್ ಗ್ರೀನ್ ಲ್ಯಾಂಡ್ ಎಸ್ಟೇಟಿನಲ್ಲಿರುತ್ತಾನೆ."

ತುಸು ಹೊತ್ತಿನಲ್ಲಿ ನಾವು ಕೀರ್ತಿ ಸ್ಟೇಶನರ್ಸ್ ಅಂಗಡಿ ದಾಟಿ, ಕಾಮಾಕ್ಷಿ ದೇವಾಲಯ ಹಾದು, ಕೊಂಚ ದೂರದಲ್ಲಿ ಎಡಕ್ಕೆ ತಿರುಗಿ, ಸಾಗಿದೆವು. ಅರ್ಧ ಕಿಲೋಮಿಟರ್ ಚಲಿಸಿದಾಗ, ಎಸ್ಟೇಟ್ ಕಂಡಿತು. ಕಾರು ಒಳಗೋಡಿಸಿದೆ. ಪೋರ್ಟಿಕೋದಲ್ಲಿ ಕಾರು ನಿಲ್ಲಿಸುತ್ತಿದ್ದಂತೆ ಒಳಗಿನಿಂದ ಇಬ್ಬರು ವ್ಯಕ್ತಿಗಳು ಹೊರಗೆ ಬಂದರು. ಒಬ್ಬನನ್ನು ತಕ್ಷಣ ನಾನು ಗುರುತಿಸಿದೆ... ಪಕ್ಕನೆ ಸುಬ್ಬಯ್ಯನಂತೇ ಕಾಣುವ ರಚನ್! ಸುಭಾಷಿಣಿಯನ್ನು ಕಾಣುತ್ತಿದ್ದಂತೆ ಆತನ ಮೊಗ ಬಿಳಿಚಿಕೊಂಡಿತು.

## ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ರವಿರಾಜ ಅವರ ಮೊದಲ ಪತ್ತೇದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ರಿಕೆಗಳಲ್ಲಿ ಇದುವರೆಗೆ ಸುಮಾರು ನಲವತ್ತಕ್ಕೂ ಹೆಚ್ಚು ಕತೆಗಳು ಪ್ರಕಟಗೊಂಡಿವೆ. ಪ್ರಥಮ ಪತ್ತೇದಾರಿ ಕಿರು ಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ನೀಳ್ಗತೆಗಳೂ ಬೆಳಕು ಕಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.